**ಓಎಸ್ ನಂಃ 69/2021**
**ಪಿಡಬ್ಲೂಃ 1**

**<u>ಸಾಕ್ಷಿಗೆ ದಿನಾಂಕ 22-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಎಸ್. ವಕೀಲರಿಂದ</u>

ನಾನು 6 ನೇ ತರಗತಿಯವರೆಗೆ ಹಿಂದಿ ಭಾಷೆಯಲ್ಲಿ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಿಮಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಆದ ಕಾರಣ, ನಿಮಗೆ ಕನ್ನಡದಲ್ಲಿ ಬರೆದ ದಾಖಲೆಗಳ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ನೀವು ಹುಟ್ಟಿ ಉಳಿದಿದ್ದು ಇವಣಿ ಗ್ರಾಮದಲ್ಲಿ ಎಂದರೆ ಸಾಕ್ಷಿ ನಾನು ಹುಟ್ಟಿದ್ದು ಇವಣಿ ಗ್ರಾಮದಲ್ಲಿ, ಆದರೆ ನ್ನ ಮದುವೆ ಮುಂಬೈಯಲ್ಲಿ ಆಗಿದೆ ಎಂದು ನುಡಿಯುತ್ತಾರೆ. ನಿಮ್ಮ ತವರುಮನೆ ಇವಣಿ ಗ್ರಾಮ ಎಂದರೆ ಸರಿ.

ನಾನು ಈ ದಾವೆಯನ್ನು ಪ್ರತಿವಾದಿ ನನಗೆ ದಾವಾ ಆಸ್ತಿಯ ಖರೀದಿ ಪತ್ರ ಮಾಡಿಕೊಡಬೇಕು ಎಂದು ಹಾಕಿರುತ್ತೇನೆ. ಪ್ರತಿವಾದಿಗೆ ನನ್ನ ಪ್ರಕಾರ 4 ಜನ ಮಕ್ಕಳು. ಪ್ರತಿವಾದಿಗೆ 5 ಜನ ಮಕ್ಕಳು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನೀವು ನಿಶಾನೆ ಪಿ-1 ಮಾಡಿಕೊಳ್ಳುವ ಸಮಯದಲ್ಲಿ ಪ್ರತಿವಾದಿಯ ಮಕ್ಕಳ ಸಹಿ ಪಡೆದಿಲ್ಲ ಎಂದರೆ ಸಾಕ್ಷಿ ಇಬ್ಬರು ಮಕ್ಕಳ ಸಹಿ ಪಡೆದಿದ್ದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮಕ್ಕಳು ಈಗ ಪ್ರಾಯಾಸ್ತರಾಗಿದ್ದಾರೆ ಎಂದರೆ ಇರಬಹದು. ಪ್ರತಿವಾದಿಯ ಮಕ್ಕಳು ನಿಶಾನೆ ಪಿ-1 ದಾಖಲೆ ಆಗಿದೆ ಎನ್ನುವ ಸಮಯದಲ್ಲಿ ಪ್ರಾಯಾಸ್ತರಿದ್ದರು ಎಂದರೆ ಸರಿ.

ನಾನು ನಿಶಾನೆ ಪಿ-1 ದಾಖಲೆ ಬರೆಸಿಕೊಳ್ಳುವಾಗ ಕೇವಲ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಪಹಣಿ ಪತ್ರಿಕೆಯು ಕನ್ನಡದಲ್ಲಿದ್ದ ಕಾರಣ, ನಿಮಗೆ ಅದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ನಾನು ಬೇರೆಯವರಿಂದ ಓದಿಸಿ ಅರ್ಥಮಾಡಿಕೊಂಡಿದ್ದೆನೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯ ಬಗ್ಗೆ ನಿಶಾನೆ ಪಿ-1 ದಾಖಲೆ ಮಾಡಿಕೊಳ್ಳುವಾಗ ಬೇರೆ ಕಂದಾಯ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಸರಕಾರದವರು ಪಿ.ಟಿ.ಸಿ.ಎಲ್. ಕಾಯ್ದೆ ಅಡಿಯಲ್ಲಿ ಪ್ರತಿವಾದಿಗೆ ನೀಡಿದ್ದರು ಎಂದರೆ ಸರಿ. ಸರಕಾರದಿಂದ ಮಂಜೂರಾದ ನಂತರ ಈಗೀನವರೆಗೆ ದಾವಾ ಆಸ್ತಿಯ ಕಬ್ಜೆ ಪ್ರತಿವಾದಿಯ ಬಳಿ ಇದೆ ಎಂದರೆ ಸರಿ.

ಪ್ರತಿವಾದಿಯ ಮಗ ವಿಜಯಕುಮಾರ ಈಗ ಇವಣಿ ಗ್ರಾಮ ಪಂಚಾಯತಿಯ ಚುನಾನಯಿತ ಪ್ರತಿನಿಧಿ ಎಂದರೆ ಸರಿ. ಪ್ರತಿವಾದಿಯ ಕುಟುಂಬ ಆರ್ಥಿಕವಾಗು ಸಧೃಡವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಕುಟುಂಬದ ಆರ್ಥಿಕ ಸ್ಥಿತಿ ನಿಶಾನೆ ಪಿ-1 ದಾಖಲೆ ಆಗುವ ಮೊದಲಿನಿಂದಲೆ ಸಧೃಡವಾಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನೀವು ಮುಂಬೈನಲ್ಲಿ ವಾಸವಾಗಿರುತ್ತೀರಿ ಎಂದರೆ ಸಾಕ್ಷಿ ನಾನು ಇವಣಿ ಗ್ರಾಮಕ್ಕೆ ಬಂದು ಹೋಗುತ್ತೆನೆ ಎಂದು ನುಡಿಯುತ್ತಾರೆ. ನೀವು ಇವಣಿ ಗ್ರಾಮದಲ್ಲಿರುವ ನಿಮ್ಮ ಆಸ್ತಿಗಳನ್ನು ಬೇರೆಯವರಿಗೆ ಭೋಗ್ಯಕ್ಕೆ ನೀಡಿ ಮುಂಬೈನಲ್ಲಿಯೇ ವಾಸವಾಗಿರುತ್ತೀರಿ ಎಂದರೆ ಸಾಕ್ಷಿ ನಾನೇ ನಮ್ಮ ಆಸ್ತಿಗಳನ್ನು ನೋಡಿಕೊಳ್ಳುತ್ತೆನೆ ಎಂದು ನುಡಿಯುತ್ತಾರೆ. ನೀವು ಈಗ ಒಕ್ಕಲುತನ ಮಾಡುವುದಿಲ್ಲ ಎಂದರೆ ಸರಿಯಲ್ಲ. ನೀವು ಒಕ್ಕಲುತನ ಮಾಡುತ್ತೀರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೀರಿ ಎಂದರೆ ಸರಿಯಲ್ಲ.

ನಿಶಾನೆ ಪಿ-1 ದಾಖಲೆ ಆಗುವ ಮೊದಲು ನಮ್ಮ ಮಾತುಕತೆ ಇವಣಿ ಗ್ರಾಮದ ಮರಗಮ್ಮ ಗುಡಿಯ ಹತ್ತಿರ ಆಗಿರುತ್ತದೆ. ನಮ್ಮ ಮಾತುಕತೆಯು ದಿನಾಂಕ: 11-04-2012 ರಂದು ಆಗಿರುತ್ತದೆ. ಮಾತುಕತೆಯಾದ 4 ದಿನಗಳ ನಂತರ ಕಾಗದದ ಮೇಲೆ ಬರೆಸಿ ಸಹಿ ಪಡೆದಿರುತ್ತೇವೆ. ಕಾಗದವನ್ನು ಪ್ರತಿವಾದಿಯೇ ತರಿಸಿದ್ದು, ಅದನ್ನು ಸಾತಖೇಡ್ ಸಿದ್ದಪ್ಪ ಇವರು ಬರೆದಿರುತ್ತಾರೆ. ಮಾತುಕತೆಯಾಗುವ ಸಮಯದಲ್ಲಿ 4-5 ಜನರು ಅಲ್ಲಿದ್ದರು. ಅಲ್ಲಿ ಪ್ರತಿವಾದಿಯ ಇಬ್ಬರು ಮಕ್ಕಳು, ಪ್ರತಿವಾದಿ ಮತ್ತು ನಾನು ಹಾಗೂ ನನ್ನ ಗಂಡ ಅಲ್ಲಿ ಇದ್ದೇವು. ನೀವು ಹೇಳುವಂತೆ ಯಾವುದೇ ಮಾತುಕತೆ ಆಗಿಲ್ಲ ಮತ್ತು ಅಲ್ಲಿ ಯಾರೂ ಇರಲಿಲ್ಲ ಎಂದರೆ ಸರಿಯಲ್ಲ.

ನಮ್ಮ ಮಾತುಕತೆಯಲ್ಲಿ ಪ್ರತಿವಾದಿ ದಾವಾ ಆಸ್ತಿಗೆ ರೂ. 5 ಲಕ್ಷ ಕೇಳಿದ್ದು, ನಾವು 3 ಲಕ್ಷ ಹೇಳಿದ ಕಾರಣ, ಮಾತುಕತೆ ಮಾಡಿ ರೂ. 4 ಲಕ್ಷಕ್ಕೆ ದಾವಾ ಆಸ್ತಿಯ ವ್ಯವಹಾರ ಆಗಿರುತ್ತದೆ. ನಮ್ಮ ವ್ಯವಹಾರದ ಪ್ರಕಾರ ನಾನು ರೂ. 2 ಲಕ್ಷ ಹಣವನ್ನು ಮಾತುಕತೆ ಸಮಯದಲ್ಲಿ ನೀಡಿ, ಉಳಿದ ರೂ. 2 ಲಕ್ಷ ಹಣವನ್ನು ನೊಂದಾಯಿತ ಕಾಗದ ಮಾಡುವ ಸಮಯದಲ್ಲಿ ನೀಡುವುದಾಗಿ ಮಾತುಕತೆ ಆಗಿತ್ತು. ನೀವು ಪ್ರತಿವಾದಿಗೆ ಎಂದಿಗೂ ರೂ. 2 ಲಕ್ಷ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಹೇಳುವಂತೆ ಪ್ರತಿವಾದಿ ನಿಶಾನೆ ಪಿ-1 ರಂತೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1 ಕ್ಕೆ ನೀವು ಹೇಳುವಂತೆ ಪ್ರತಿವಾದಿಯ

ಮಕ್ಕಳು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1 ಆದ 3-4 ತಿಂಗಳಲ್ಲಿ ನೋಂದಾಯಿತ ದಸ್ತು ಮಾಡಿಕೊಡುತ್ತೇವೆ ಎಂದು ಪ್ರತಿವಾದಿ ನಮಗೆ ತಿಳಿಸಿರುತ್ತಾರೆ. ನಿಶಾನೆ ಪಿ-1ರಲ್ಲಿ ಪ್ರತಿವಾದಿ 3-4 ತಿಂಗಳಲ್ಲಿ ನೊಂದಾಯಿತ ದಸ್ತು ಮಾಡಿಕೊಡುತ್ತೇನೆಂದು ಹೇಳಿದ ಬಗ್ಗೆ ನಮೂದು ಇದೆ.

ನಿಶಾನೆ ಪಿ-1 ಮಾಡುವ ಸಮಯದಲ್ಲಿ ಇವಣಿ ಗ್ರಾಮದಲ್ಲಿ 1 ಎಕರೆಗೆ ರೂ. 5 ಲಕ್ಷದಂತೆ ಮಾರುಕಟ್ಟೆ ಬೆಲೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯು ನಿಶಾನೆ ಪಿ-1 ದಾಖಲೆಯನ್ನು ದಿನಾಂಕ: 08-04-2012ರಂದು ತಂದಿದ್ದಳು. ಪ್ರತಿವಾದಿ ಎಂದಿಗೂ ನಿಮಗೆ ನಿಶಾನೆ ಪಿ-1 ದಾಖಲೆಯನ್ನು ಮಾಡಿಕೊಟ್ಟಿಲ್ಲ ಮತ್ತು ನೊಂದಾಯಿತ ದಸ್ತನ್ನು ಮಾಡಿಕೊಡುತ್ತೇನೆಂದು ಹೇಳಿಲ್ಲ ಎಂದರೆ ಸರಿಯಲ್ಲ. ನಿಮ್ಮ ವಕೀಲರ ಮುಖಾಂತರ ನೋಟಿಸು ಕಳುಹಿಸಿದ ನಂತರವೇ ಪ್ರತಿವಾದಿ ಕುಟುಂಬದವರಿಗೆ ನೀವು ಖೊಟ್ಟಿಯಾಗಿ ನಿಶಾನೆ ಪಿ-1 ದಾಖಲೆಯನ್ನು ಸೃಷ್ಟಿಸಿದ್ದೀರಿ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಪ್ರತಿವಾದಿ ಕುಟುಂಬ ಸಧೃಡರಾದ ಕಾರಣ, ಅವರಿಗೆ ದಾವಾ ಆಸ್ತಿಯನ್ನು ಮಾರುವ ಪ್ರಸಂಗ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಎಂದಿಗೂ ನಿಮ್ಮಿಂದ ಹಣ ಪಡೆದಿಲ್ಲ, ಮತ್ತು ನಿಶಾನೆ ಪಿ-1 ದಾಖಲೆಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1 ದಾಖಲೆ ಕನ್ನಡದಲ್ಲಿದ್ದ ಕಾರಣ, ಅದರಲ್ಲಿ ಏನು ಬರೆಯಲಾಗಿದೆ ಎಂದು ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನೀವು ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.